(ಇಂದು ದಿನಾಂಕಃ 20-11-2025 ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.)

**ಪಾಟೀ ಸವಾಲುಃ 1 ರಿಂದ 12 ನೇ ಪ್ರತಿವಾದಿಯರ ಪರಃ ಶ್ರೀ ಆರ್.ವಿ.ಬಿ. ವಕೀಲರಿಂದಃ**

ತಿಮ್ಮಾ ಗೌಡ ಮತ್ತು ದಾನು ಗೌಡ ಅಣ್ಣ-ತಮ್ಮಂದಿರು ಎಂದರೆ ಸರಿ. ತಿಮ್ಮಾ ಬುದವಂತ ಗೌಡ ಇವರು ನಮೂನೆ ನಂ.7 ನ್ನು ಭೂನ್ಯಾಯಮಂಡಳಿಗೆ ಸಲ್ಲಿಸಿದ್ದರಿಂದ ಅವರಿಗೆ ಮಂಜೂರಾಗಿದೆ ಎಂದರೆ ಸರಿ, ಸಾಕ್ಷಿ ಮುಂದುವರಿದು ನಮಗೂ ಸಹ ಆಸ್ತಿ ಬರಬೇಕು ಎಂದು ಹೇಳುತ್ತಾರೆ. ದಾನು ಗೌಡ ದಾವಾ ಸ್ವತ್ತನ್ನು ಸಾಗುವಳಿ ಮಾಡಿದ್ದನು ಎಂದು ತೋರಿಸಲು ದಾಖಲಾತಿ ಇಲ್ಲ ಎಂದರೆ ಸಾಕ್ಷಿ ನಮ್ಮ ಬಳಿ ಇಲ್ಲ ಎಂದು ಹೇಳುತ್ತಾರೆ. ಈ ಹಿಂದೆ ಯಾರು ಜಮೀನನ್ನು ಉಳುಮೆ ಮಾಡುತ್ತಿದ್ದರು ಅವರ ಹೆಸರುಗಳನ್ನು

ಪಹಣಿ ಕಾಲಂ ನಂ.12 ರಲ್ಲಿ ನಮೂದಿಸುತ್ತಿದ್ದರು ಎಂದರೆ ಸರಿ. ಭೂಮಾಲಿಕರು ಮುಂಚೆ ಯಾರಿಗೆ ಜಮೀನನ್ನು ಗೇಣಿ ಮಾಡಲು ಕೊಡುತ್ತಿದ್ದರು ಅವರ ಹೆಸರು ಹಕ್ಕು ಬದಲಾವಣೆಯಲ್ಲಿ ನಮೂದಿಸುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ತಿಮ್ಮಾ ಗೌಡ ಮತ್ತು ದಾನು ಗೌಡ ಜೀವಿತವಿದ್ದಾಗ ಬೇರೆ ಬೇರೆ ವಾಸಮಾಡುತ್ತಿದ್ದರು ಎಂದರೆ ಸರಿಯಲ್ಲ. ಸದರಿಯವರು ಯಾವ ವರ್ಷದಲ್ಲಿ ಬೇರೆ ಬೇರೆ ವಾಸ ಮಾಡಲು ಪ್ರಾರಂಭಿಸಿದ್ದಾರೆ ಎಂದು ನನಗೆ ಹೇಳಲು ಬರುವುದಿಲ್ಲ. ತಿಮ್ಮಾ ಗೌಡ ಮತ್ತು ದಾನು ಗೌಡ ಜೀವಿತವಿದ್ದಾಗ  ಅವರ ಅಡುಗೆ ಮನೆಗಳು ಬೇರೆ ಬೇರೆಯಾಗಿದ್ದವು ಎಂದರೆ ಸರಿಯಲ್ಲ. ಅದೇ ರೀತಿ ತುಳಸಿ ಕಟ್ಟೆ ಸಹ ಬೇರೆ ಬೇರೆ ಇದ್ದವು ಎಂದರೆ ಸರಿಯಲ್ಲ. ತಿಮ್ಮಾ ಗೌಡ ಮತ್ತು ದಾನು ಗೌಡ ಇಬ್ಬರು ಒಂದೇ ಮನೆಯಲ್ಲಿ ವಾಸವಾಗಿದ್ದರು ಎಂದು ತೋರಿಸಲು ಯಾವುದೇ ದಾಖಲಾತಿಗಳು ಇಲ್ಲ. ಸದರಿಯವರು ಬೇರೆ ಬೇರೆ ವಾಸವಾಗಿದ್ದು ಒಂದೇ ಮನೆಯಲ್ಲಿ ವಾಸವಾಗಿರಲಿಲ್ಲ ಅನ್ನುವುದು ಸರಿಯಲ್ಲ.

ಚಾಲ ಗೇಣಿ ಮತ್ತು ಮೂಲ ಗೇಣಿ ಎಂದರೆ ಏನು ಎಂದು ನನಗೆ ಗೊತ್ತಿಲ್ಲ. ಸಾಕ್ಷಿ ಹೇಳಲು ಬರುವ ಮುಂಚೆ ಹಳೆಯ ಕಂದಾಯ ದಾಖಲಾತಿಗಳನ್ನು ನೋಡಿ ಓದಿಕೊಂಡು ಬಂದಿಲ್ಲ. ದಾವಾ ಸ್ವತ್ತು ಪರ್ತಗಾಳಿ ಮಠಕ್ಕೆ ಸೇರಿದಂತಹ ಆಸ್ತಿ ಎಂದರೆ ಸರಿ. ಪರ್ತಗಾಳಿ ಮಠದ ಮಾಲಿಕತ್ವದ ಅಡಿಯಲ್ಲಿ ತಿಮ್ಮಾ ಗೌಡ ಇವರು ಚಾಲಗೇಣಿದಾರನಾಗಿ ಉಳುಮೆ ಮಾಡುತ್ತಿದ್ದ ಎಂದರೆ ಸಾಕ್ಷಿ ಇಬ್ಬರೂ ಮಾಡುತ್ತಿದ್ದರು ಎಂದು ಹೇಳುತ್ತಾರೆ. ತಿಮ್ಮಾ ಗೌಡ ಒಬ್ಬನೇ ಸಾಗುವಳಿ ಮಾಡುತ್ತಿದ್ದ ಎಂದರೆ ಸರಿಯಲ್ಲ. ಪಹಣಿಪತ್ರಿಕೆಯಲ್ಲಿ ತಿಮ್ಮಾ ಗೌಡನ ಹೆಸರು ಬಂದಿದೆ ಎಂದರೆ ಸಾಕ್ಷಿ ಆತ ಮನೆಯಲ್ಲಿ ದೊಡ್ಡವನು ಇರುವುದರಿಂದ ಅವರ ಹೆಸರು ನಮೂದಾಗಿದೆ ಎಂದು ಹೇಳುತ್ತಾರೆ. ಭೂನ್ಯಾಯಮಂಡಳಿಯಿಂದ ಆದೇಶವಾದ ನಂತರ ಅದನ್ನು ಪ್ರಶ್ನಿಸಿಲ್ಲ ಎಂದರೆ ಸಾಕ್ಷಿ ಅವರು ಕೊಡುತ್ತೇನೆ ಎಂದು ಹೇಳಿದ್ದರಿಂದ ಪ್ರಶ್ನಿಸಿಲ್ಲ ಎಂದು ಹೇಳುತ್ತಾರೆ.

ಭೂನ್ಯಾಯಮಂಡಳಿ ಸಲ್ಲಿಸಿದ ನಮೂನೆ ನಂ. 7, ಭೂನ್ಯಾಯಮಂಡಳಿ ಮಾಡಿದ ಆದೇಶದಲ್ಲಿ ಅಥವಾ ನಮೂನೆ ನಂ. 10 ರಲ್ಲಿ ತಿಮ್ಮಾ ಗೌಡ ಕುಟುಂಬದ ಮ್ಯಾನೇಜರ್ ಎಂದು ನಮೂದಾಗಿಲ್ಲ ಎಂದರೆ ನನಗೆ ಗೊತ್ತಿಲ್ಲ. ಒಂದುವೇಳೆ ಕುಟುಂಬದ ಒಳಿತಿಗಾಗಿ ಕೊಟ್ಟಿದ್ದರೆ ತಿಮ್ಮಾ ಗೌಡ ಕುಟುಂಬದ ಮ್ಯಾನೇಜರ್ ಎಂದು ನಮೂದಿಸುತ್ತಿದ್ದರು ಎಂದರೆ ಸಾಕ್ಷಿ ಅವರು ಮನೆಯಲ್ಲಿ ದೊಡ್ಡವನಾಗಿದ್ದರಿಂದ ಅವರ ಹೆಸರಿನಲ್ಲಿ ಆಗಿದೆ ಎಂದು ಹೇಳುತ್ತಾರೆ. ತಿಮ್ಮಾ ಗೌಡ ಮತ್ತು ದಾನು ಗೌಡ ಇವರ ಕುಟುಂಬಗಳು ಬೇರೆ ಬೇರೆಯಾಗಿದ್ದರಿಂದ ತಿಮ್ಮಾ ಗೌಡ ಇವರ ಹೆಸರಿನಲ್ಲಿ ಮಂಜೂರಾಗಿದೆ ಎಂದರೆ ಸರಿಯಲ್ಲ. ದಾವಾ ಸ್ವತ್ತನ್ನು ನಮ್ಮ ತಂದೆ ದಾನು ಗೌಡ ಯಾವತ್ತೂ ಕೂಡ ಸಾಗುವಳಿ ಮಾಡಿಲ್ಲ ಅನ್ನುವುದು ಸರಿಯಲ್ಲ.

ದಾವಾಸ್ವತ್ತುಗಳಲ್ಲಿ ಕೆಲವು ಆಸ್ತಿಗಳು ಕೊಂಕಣ ರೈಲ್ವೆಗೆ ಭೂಸ್ವಾಧೀನಗೊಂಡಿವೆ ಎಂದರೆ ಸರಿ. ಅದರಂತೆ ಕೊಂಕಣ ರೈಲ್ವೆಯವರು ಪರಿಹಾರ ಧನವನ್ನು ನೀಡಿದ್ದಾರೆ ಎಂದರೆ ಸರಿಯಲ್ಲ. ಪರಿಹಾರ ಧನವನ್ನು ತಿಮ್ಮಾ ಗೌಡ ಇವರ ಕುಟುಂಬದವರು ಪಡೆದುಕೊಂಡಿದ್ದು ನಮಗೆ ಯಾವುದೇ ಪರಿಹಾರ ಧನ ಬಂದಿಲ್ಲ ಎಂದರೆ ಸರಿ. 1995 ಕ್ಕಿಂತ ಮುಂಚೆ ಕೆಲವು ಆಸ್ತಿಗಳು ಭೂಸ್ವಾಧೀನಗೊಂಡು ಪರಿಹಾರ ಧನ ನೀಡಿದ್ದಾರೆ ಎಂದರೆ ಸರಿ. ಭೂ ಸ್ವಾಧೀನ ಕಚೇರಿಗೆ ಹೋಗಿ ಪರಿಹಾರ ಧನ ನೀಡಲು ನಾವು ಅರ್ಜಿ ಸಲ್ಲಿಸಿಲ್ಲ ಎಂದರೆ ಸರಿ, ಸಾಕ್ಷಿ ಮುಂದುವರಿದು ಅವರು ಕೊಡುತ್ತೇನೆ ಎಂದು ಹೇಳಿದ್ದರಿಂದ ಅರ್ಜಿ ಸಲ್ಲಿಸಿಲ್ಲ ಎಂದು ಹೇಳುತ್ತಾರೆ. ಭೂಸ್ವಾಧೀನಗೊಂಡ ಆಸ್ತಿಗಳಲ್ಲಿ ನಮ್ಮ ತಂದೆ ದಾನು ಗೌಡ ಇವರಿಗೆ ಹಕ್ಕು ಇಲ್ಲದ್ದರಿಂದ ಯಾವುದೇ ಅರ್ಜಿ ಸಲ್ಲಿಸಿಲ್ಲ ಎಂದರೆ ಸರಿಯಲ್ಲ. 1995 ರಲ್ಲಿ ಭೂಸ್ವಾಧೀನಗೊಂಡು ಪರಿಹಾರ ಧನ ಬಂದ ನಂತರ ದಾವೆ ಸಲ್ಲಿಸಲು ತೊಂದರೆ ಇರಲಿಲ್ಲ ಎಂದರೆ ಸಾಕ್ಷಿ ಅವರು ಕೊಡುತ್ತೇನೆ ಎಂದು ಹೇಳಿದ್ದರಿಂದ ಹಾಕಿಲ್ಲ ಎಂದು ಹೇಳುತ್ತಾರೆ. ಅವರು ಕೊಡುತ್ತೇನೆ ಎಂದು ಹೇಳಿದ್ದಾರೆನ್ನುವ ದಾಖಲಾತಿಗಳು ಇಲ್ಲ. ಈ ದಾವೆ ಹಾಕುವ ಮುಂಚೆ ನಾವು ಅಸಲು ದಾವಾ ಸಂಖ್ಯೆ 7/2016 ನ್ನು ದಾಖಲಿಸಿದ್ದೆವು ಎಂದರೆ ಸರಿ. ಸದರಿ ಕೇಸಿನಲ್ಲಿ ಪ್ರತಿವಾದಿಯರು ಈ ದಾವೆಯಲ್ಲಿ ಹಾಕಿದಂತೆ ಆ

ದಾವೆಯಲ್ಲೂ ಸಹ ಸವಿಸ್ತಾರವಾಗಿ ಪ್ರತಿವಾದ ಪತ್ರ ಸಲ್ಲಿಸಿದ್ದರು ಎಂದರೆ ಸರಿ. ಸದರಿಯವರು ತಕರಾರು ಹಾಕಿದ ನಂತರ ನಮ್ಮ ದಾವೆಯಲ್ಲಿ ಹುರುಳಿಲ್ಲ ಎಂದು ನಾವು ದಾವೆಯನ್ನು ನಡೆಸದೇ ಇದ್ದುದರಿಂದ ವಜಾ ಆಗಿದೆ ಎಂದರೆ ಸರಿ. ಸಾಕ್ಷಿ ಮುಂದುವರಿದು ಆರೋಗ್ಯ ಸರಿ ಇಲ್ಲದ್ದರಿಂದ ವಜಾ ಆಗಿದೆ ಎಂದು ಹೇಳುತ್ತಾರೆ. ಸದರಿ ದಾವೆಯನ್ನು ಪುನರ್ ಸ್ಥಾಪನೆಗಾಗಿ ನಾವು ಹಾಕಿದಂತಹ ಅರ್ಜಿ ಸಹ ವಜಾ ಆಗಿದೆ ಎಂದರೆ ಸರಿ. ನಾವು ದಾವೆಯಲ್ಲಿ ಒಟ್ಟೂ 7 ಇದ್ದೇವೆ ಎಂದರೆ ಸರಿ. ಒಬ್ಬರಿಗೆ ಆರೋಗ್ಯ ಸರಿ ಇಲ್ಲದಿದ್ದರೆ ಉಳಿದವರು ದಾವೆ ನಡೆಸಲು ತೊಂದರೆ ಇರಲಿಲ್ಲ ಎಂದರೆ ಸಾಕ್ಷಿ ಉಳಿದವರು ಮೃತಪಟ್ಟಿದ್ದಾರೆ ಎಂದು ಹೇಳುತ್ತಾರೆ. ವಾದಿಯರೆಲ್ಲಾ ಜೀವಿತವಾಗಿದ್ದಾರೆ ಎಂದರೆ ಸರಿ. ಈ ಹಿಂದೆ ಹಾಕಿದಂತಹ ನಮ್ಮ ದಾವೆ ವಜಾಗೊಂಡಿದ್ದರಿಂದ ಈ ದಾವೆ ಊರ್ಜಿತವಾಗುವುದಿಲ್ಲ ಎಂದರೆ ಸರಿಯಲ್ಲ. ಆ ದಾವೆ ವಜಾ ಆದ ನಂತರ ಈ ದಾವೆಯನ್ನು ವಿಳಂಬವಾಗಿ ಹಾಕಿದ್ದರಿಂದ ಈ ದಾವೆ ಕಾನೂನಡಿಯಲ್ಲಿ ಊರ್ಜಿತವಾಗುವುದಿಲ್ಲ ಎಂದರೆ ಸರಿಯಲ್ಲ. ನಾವು ಸರಿಯಾಗಿ ನ್ಯಾಯಾಲಯದ ಶುಲ್ಕವನ್ನು ಕಟ್ಟಿಲ್ಲ ಅನ್ನುವುದು ಸರಿಯಲ್ಲ. ನಮ್ಮ ತಂದೆ ಯಾವತ್ತೂ ಕೂಡ ದಾವಾಸ್ವತ್ತನ್ನು ಉಳುವೆ ಮಾಡದೇ ಇದ್ದುದರಿಂದ ಸದರಿ ಸ್ವತ್ತಿನಲ್ಲಿ ನಮಗೆ ಯಾವುದೇ ಹಕ್ಕು ಇಲ್ಲ ಅನ್ನುವುದು ಸರಿಯಲ್ಲ. ತಿಮ್ಮಾ ಗೌಡ ಇವರು ತಮ್ಮ ಸ್ವತಂತ್ರ ನಾತೆಯಿಂದ ಚಾಲಗೇಣಿ ನಾತೆಯಿಂದ ದಾವಾ ಸ್ವತ್ತನ್ನು ಉಳುಮೆ ಮಾಡುತ್ತಿದ್ದುದರಿಂದ ಭೂನ್ಯಾಯಮಂಡಳಿಯಿಂದ ಅವರಿಗೆ ವೈಯಕ್ತಿಕವಾಗಿ ದಾವಾ ಸ್ವತ್ತು ಮಂಜೂರಾಗಿದೆ ಎಂದರೆ ಸರಿಯಲ್ಲ.

**ಪ್ರತಿವಾದಿ ನಂ. 13, 14(ಎ) ಯಿಂದ 14(ಸಿ) ಪರ ವಕೀಲರು ಹಾಜರಿದ್ದು 1 ರಿಂದ 12 ನೇ ಪ್ರತಿವಾದಿ ಪರ ವಕೀಲರು ಮಾಡಿದ ಪಾಟೀ ಸವಾಲನ್ನೇ ಅಳವಡಿಸಿಕೊಂಡಿರುತ್ತಾರೆ.**

**ಮರು ವಿಚಾರಣೆ – ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ.

ಪ್ರಧಾನ ಹಿರಿಯ ಸಿವಿಲ್ ಜಡ್ಜ್, ಕಾರವಾರ